ದಾದರೆ ಕಳೆದ ಸಾರಿ ಕೃಷ್ಣಾರವರು ಕೊಟ್ಟ ಹೇಳಿಕೆ ಮತ್ತು ನಗಗೆ ಬಂದ ಮಾಹಿತಿಯನ್ನು ಸರಿದೂಗಿಸಿ, ಸತ್ಯಾಂಶವಿದೆಯೆಂದು ಹೇಳಿ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಟ್ಟಿದ್ದೆ. ಆ ದೃಷ್ಟಿಯಿಂದ ಸದಸ್ಯರ ಗೌರವವನ್ನು ಕಾಪಾಡುವುದಕ್ಕೆ ಮತ್ತು ಸಾರ್ವಜನಿಕರು ಇಲಾಖೆಯಲ್ಲಿ ನಂಬಿಕೆ ಇಡುವುದಕ್ಕೆ ಹಿಂದೆಂದೂ ನಡೆಯದ ರೀತಿಯಲ್ಲಿ ನಾನು ನಡೆದುಕೊಂಡು ಬಂದಿದ್ದೇನೆ. ನಿನ್ನೆಯಿಂದ ಇವತ್ತಿನವರೆಗೆ ಈ ಸಭೆಯಲ್ಲಿ ಕಾರ್ಯಕಲಾಪಗಳು ನಡೆಯದ್ದಕ್ಕೆ ಸ್ವಲ್ಪಮಟ್ಟಿಗೆ ನಾನು ವಿಷಾದಪಡುತ್ತೇನೆ. ಹಾಗೂ ಈಗ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಅವರಿಗೂ ನಾನು ಅಭಿನಂದಿಸುತ್ತೇನೆ. ಯಾರು ತಪ್ಪು ಮಾಡಿದ್ದಾರೋ ಆವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತೇನೆ. ಮತ್ತು ಈ ವಿಚಾರವನ್ನು ತಿಳಿದುಕೊಳ್ಳುವುದಕ್ಕೋಸ್ಕರ ಫೋನ್ ಕಾಂಟಾಕ್ಟ್ ಕೂಡಾ ಇಟ್ಟುಕೊಂಡಿದ್ದೇನೆ. ಆದುದರಿಂದ ಈ ವಿಚಾರವನ್ನು ಇಷ್ಟಕ್ಕೆ ನಿಲ್ಲಿಸಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸಹಕಾರ ಸಂಘಗಳಲ್ಲಿ ದುಡಿಯುವ ನೌಕರರಿಗೆ ಪರಿಷ್ಕೃತ ತುಟ್ಟಿ ಭತ್ಯ ನೀಡುವ ಬಗ್ಗೆ

೫೫೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಸಗಟು ವ್ಯಾಪಾರ ಸಂಘ ಮಂಗಳೂರು ಜನತಾ ಬಜಾರ್, ದಕ್ಷಿಣ ಕನ್ನಡ ಕೃಷಿಕರ ಸಹಕಾರ ವ್ಯಾಪಾರ ಸಂಘಗಳಲ್ಲಿ ದುಡಿಯುವ ನೌಕರರಿಗೆ ಸರ್ಕಾರಿ ನೌಕರರಿಗಿ ಕೊಡುವಂತೆ ತುಟ್ಟಿ ಭತ್ಯ ಕೊಡಲಾಗುತ್ತದೆಯೆ ?

(ಆ) ಈ ಬಗ್ಗೆ ಹಾಗಿಲ್ಲದಿದ್ದಲ್ಲಿ ಅವರಿಗೆಲ್ಲಾ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆಯನ್ನು ಯಾವಾಗ ಕೊಡಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಸಗಟು ವ್ಯಾಪಾರ ಸಂಘ ನಿಯಮಿತ (ಮಂಗಳೂರು ಜನತಾ ಬಜಾರ್) ನೌಕರರಿಗೆ ಪರಿಷ್ಕೃತ ದರದಲ್ಲಿ ತುಟ್ಟಿ ಭತ್ಯವನ್ನು ೧-೪-೧೯೮೫ ರಿಂದ ಮಂಜೂರು ಮಾಡಲಾಗಿದ್ದು ಇದು ಸರ್ಕಾರಿ ನೌಕರರಿಗೆ ಕೊಡುವ ತುಟ್ಟಿ ಭತ್ಯಕ್ಕೆ ಸಮನಾಗಿರುವುದಿಲ್ಲ. ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ವ್ಯಾಪಾರ ಸಂಘದಲ್ಲಿ ದುಡಿಯುವ ನೌಕರರಿಗೆ ಸರ್ಕಾರಿ ನೌಕರರಿಗೆ ಕೊಡುವಂತೆ ತುಟ್ಟಿ ಭತ್ಯ ಕೊಡಲಾಗುತ್ತಿದೆ.

(ಆ) ತುಟ್ಟಿ ಭತ್ಯವನ್ನು ಆಯಾ ಸಂಘದ ಆರ್ಥಿಕ ಪರಿಸ್ಥಿತಿ ಪರಿಗಣಿಸಿ ಮಂಜೂರಾತಿ ನೀಡಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಸಗಟು ವ್ಯಾಪಾರ ಸಂಘ, ಮಂಗಳೂರು ಜನತಾ ಬಜಾರ್, ಇದರಲ್ಲಿ ದುಡಿಯುತಕ್ಕ ನೌಕರರಿಗೆ ತುಟ್ಟಿ ಭತ್ಯವನ್ನು ಸರ್ಕಾರೀ ನೌಕರರಿಗೆ ಕೊಡುತ್ತಿರುವಂತೆ ಕೊಡದೇ ಇರಲು ಕಾರಣವೇನು ? ಮತ್ತು ದಕ್ಷಿಣ ಕನ್ನಡ ಕೃಷಿಕರ ಸಹಕಾರ ವ್ಯಾಪಾರ ಸಂಘದ ನೌಕರರಿಗೆ ಮಾತ್ರ ಸರ್ಕಾರೀ ನೌಕರರಿಗೆ ಕೊಡುವಂತ ತುಟ್ಟಿ ಭತ್ಯವನ್ನು ಕೊಡುತ್ತಿರುವುದಕ್ಕೆ ಕಾರಣವೇನು ? ಜನತಾ ಬಜಾರ್‌ನಲ್ಲಿ ಕಳೆದ ೧೫-೨೦ ವರ್ಷದಿಂದ ಕೆಲಸ ಮಾಡುತ್ತಿರುವ ನೌಕರರು ಇದ್ದಾರೆ. ಅವರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಸರ್ಕಾರೀ ನೌಕರರಿಗೆ ಕೊಡುವಂತೆ ಇವರಿಗೂ ತುಟ್ಟಿ ಭತ್ಯವನ್ನು ಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈ ಜನತಾ ಬಜಾರ್‌ನ ಆರ್ಥಿಕ ಪರಿಸ್ಥಿತಿ ಹೇಗಿದೆ. ಇತ್ತೀಚೆಗೆ ಅಂದರೆ ಕಳೆದ ಒಂದೆರಡು ವರ್ಷದಿಂದ ಅಲ್ಪಸ್ವಲ್ಪ ಲಾಭ ಸಂಪಾದನೆ ಮಾಡುತ್ತಿದೆ. ಇದರ ಆರ್ಥಿಕ ಪರಿಸ್ಥಿತಿ ಉತ್ತಮವಾದಾಗ ಆ ಆಡಳಿತ ಮಂಡಲಿಯವರು ನಮ್ಮ ರಿಜಿಸ್ಟ್ರಾರ್‌ರವರಿಗೆ ಪತ್ರವನ್ನು ಬರೆದು ಕೇಳಿದರೆ ಆಗ ಪರಿಶೀಲಿಸಬಹುದು.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘವು ಬಹಳ ವರ್ಷದಿಂದ ಇದೆ. ಅಂದರೆ ಕೃಷಿಕರ ಸಹಕಾರಿ ಮಾರಾಟ ಸಂಘಕ್ಕಿಂತಲೂ ಮೊದಲೇ ಸ್ಥಾಪನೆಯಾಗಿದೆ. ಅಲ್ಲಿ ಬಹಳಷ್ಟು ನೌಕರರು ಕೆಲಸಮಾಡುತ್ತಿದ್ದಾರೆ. ಅವರು ಜೀವನ ಮಾಡಲು ಕಷ್ಟ ಇದೆ. ನಾವು ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರೂ ನಮಗೆ ಸರ್ಕಾರೀ ಮಟ್ಟದ ತುಟ್ಟಿ ಭತ್ಯ ಸಿಕ್ಕುತ್ತಿಲ್ಲವೆಂದು ಅವರು ಅಸಮಾಧಾನ ಹೊಂದಿದ್ದಾರೆ. ಆದ್ದರಿಂದ ಅವರಿಗೆ ಸರ್ಕಾರೀ ಮಟ್ಟದ ತುಟ್ಟಿ ಭತ್ಯವನ್ನು ಕೊಡಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಎಷ್ಟು ವರ್ಷದಿಂದ ಈ ಸಂಸ್ಥೆ ಇದೆ ಎಂಬುದೂ ಮುಖ್ಯವಲ್ಲ. ಆದರೆ ಎಷ್ಟು ಕೆಲಸ ಮಾಡಿದೆ ಎಂಬುದು ಮುಖ್ಯ. ತುಟ್ಟಿ ಭತ್ಯವನ್ನು ಕೊಡಬೇಕಾದರೆ ಆಯಾಯ ಸಂಘ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡೂ ಅದರ ಪ್ರಕಾರ ಕೊಡಲಾಗುತ್ತದೆ.

ಚು. ಪ್ರ. (ಶೌಕ್) ಮಾನ್ಯ ಸದಸ್ಯರು ಹಾಜರಿರಲಿಲ್ಲ.

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಸಾಗುವಳಿಗಾಗಿ ಕೆರೆಯಂ ಅಂಗಳಗಳ ಮಂಜೂರಾತಿ

೧೦೪. ಶ್ರೀ ಜಿ. ಎಸ್. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೆರೆ ಅಂಗಳಗಳನ್ನು ಸಾಗುವಳಿಗಾಗಿ ರೈತರಿಗೆ ಮಂಜೂರು ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

(ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ಹೊನ್ನೇನಹಳ್ಳಿ ಕೆರೆ ಅಂಗಳದಲ್ಲಿ ಅನಧಿಕೃತವಾಗಿ ನೀರು ನಿಲ್ಲುವ ಜಾಗಕ್ಕೆ ಸೇರಿದ ಪ್ರದೇಶವನ್ನು ಸರ್ಕಾರಿ ನೌಕರರೊಬ್ಬರಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಈ ಕಾನೂನು ಬಾಹಿರ ಕ್ರಮ ಕೈಗೊಂಡ ಅಧಿಕಾರಿಗಳ ವಿರುದ್ಧ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).—

(ಅ) ಕೆರೆ ಅಂಗಳಗಳನ್ನು ಸಾಗುವಳಿಗಾಗಿ ರೈತರಿಗೆ ಮಂಜೂರು ಮಾಡಲು ಸರಕಾರದ ಉದ್ದೇಶವಿರುವುದಿಲ್ಲ.

(ಆ) ಹೊಸದುರ್ಗ ತಾಲ್ಲೂಕು, ಹೊನ್ನೇನಹಳ್ಳಿ ಗ್ರಾಮದ ಕೆರೆ ಅಂಗಳದಲ್ಲಿ ಅನಧಿಕೃತವಾಗಿ ನೀರು ನಿಲ್ಲುವ ಜಾಗಕ್ಕೆ ಸೇರಿದ ಪ್ರದೇಶವನ್ನು ಸರ್ಕಾರಿ ನೌಕರರೊಬ್ಬನಿಗೆ ಮಂಜೂರು ಮಾಡಿರುವುದಿಲ್ಲ

(ಇ) 'ಆ' ಪ್ರಶ್ನೆಯ ಉತ್ತರದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ರಾಮದಾಸ್.- ಕೆರೆ ಅಂಗಳಗಳನ್ನು ರೈತರಿಗೆ ಮಂಜೂರು ಮಾಡಿಕೊಡುತ್ತಿರುವುದರಿಂದ ಕೆರೆಯಲ್ಲಿ ನೀರು ನಿಲ್ಲಲು ಜಾಗ ಇಲ್ಲದಂತಾಗುತ್ತಿದೆ ಎಂದು ದೂರಗಳು ಬರುತ್ತಿವೆ. ಹೊಸದುರ್ಗ ತಾಲೂಕಿನ ಹೊನ್ನೇನಹಳ್ಳಿ ಗ್ರಾಮದ ಕೆರೆ ಅಂಗಳಗಳಲ್ಲಿ ಸರ್ಕಾರಿ ನೌಕರರೊಬ್ಬರು ತೆಂಗಿನ ಗಿಡಗಳನ್ನು ನೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಬಂದಿಲ್ಲದಿದ್ದರೆ ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಂದ ಇದರ ಬಗ್ಗೆ ಒಂದು ವರದಿಯನ್ನು ತರಿಸಿಕೊಳ್ಳುತ್ತೀರಾ ?